ಶ್ರೀ ಟಿ. ಮಾದಯ್ಯಗೌಡ.—ಹಳ್ಳಿಮಾರಾ ಯೋಜನೆಯನ್ನು ಕೈಬಿಟ್ಟ ಕಾರಣದಿಂದಲೇ ಅಲ್ಲವೇ ಮಂಚನಬೆಲೆ ಪ್ರಾಜೆಕ್ಟ್ ಮತ್ತು ಅರ್ಕಾವತಿ ಪ್ರಾಜೆಕ್ಟ್‌ಗಳನ್ನು ಸರ್ಕಾರ ತ್ವರಿತವಾಗಿ ಕೈಕೊಳ್ಳಬೇಕು ಎಂದು ಇರತಕ್ಕದ್ದು ?

ಶ್ರೀ ವೀರೇಂದ್ರ ಪಾಟೀಲ್.—ಮಂಚನಬೆಲೆ ಪ್ರಾಜೆಕ್ಟನ್ನು ತೆಗೆದುಕೊಳ್ಳಬೇಕೆಂದು ವಿಚಾರ ಮಾಡಿ ಅದಕ್ಕೆ ಬೇಕಾಗುವಂಥ ಪ್ಲಾನ್ ಎಸ್ಟಿಮೇಟ್ ಎಲ್ಲ ತಯಾರಾಗಿವೆ. ಅರ್ಕಾವತಿ ಪ್ರಾಜೆಕ್ಟ್ ತೆಗೆದುಕೊಳ್ಳಬೇಕೆಂದು ವಿಚಾರ ಮಾಡಿದ್ದೇವೆ.

Sri C. J. MUCKANNAPPA.—May I know the capacity of Thippagondanahalli and the surplus in Hallimala and Arkavathi valley ?

Sri VEERENDRA PATIL.—I require notice.

ಶ್ರೀ ಸಿ. ಆರ್. ರಂಗೇಗೌಡ.—ನಾನು ಕೇಳಿದ ಪ್ರಶ್ನೆಗೆ ಮಂತ್ರಿಗಳು ಉತ್ತರದಲ್ಲಿ ಹೇಳಿದರು : ತಿಪ್ಪಗೊಂಡನಹಳ್ಳಿ ಕೆರೆಗೆ ನೀರು ಬರುವುದಕ್ಕೆ ತೊಂದರೆಯಾಗುವಂತಿದ್ದರೆ ಅಂತ ಕೆಲಸಗಳಿಗೆ ಅನುಮತಿಯನ್ನು ಕೊಡರಾಗುವುದಿಲ್ಲ, ಎಂದು. ಆದರೆ ನಾನು ಅದನ್ನು ಕೇಳುತ್ತಿಲ್ಲ. ತಿಪ್ಪಗೊಂಡನಹಳ್ಳಿ ಕೆರೆಯ ಕೆಳಭಾಗದಲ್ಲಿ ಮತ್ತು ಹಳ್ಳಿಮಾರಾ ಮೇಲ್ಭಾಗದಲ್ಲಿ ಮಾರಿಹಳ್ಳಕ್ಕೆ ಅಡ್ಡರಾಗಿ ಕಟ್ಟಲು ಅವಕಾಶವಿರುವ ಒಂದು ಯೋಜನೆಗೆ ಇರಾಖೆಯವರಿಂದ ಮಂಜೂರಾತಿ ದೊರಕಲ್ಲ. ಇದಕ್ಕೆ ಸಂಬಂಧಪಟ್ಟ ವಿವರಗಳನ್ನು ಮಾನ್ಯ ಮಂತ್ರಿಗಳು ತರಿಸಿಕೊಂಡು ಜಾಗ್ರತೆ ಕಾರ್ಯಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನಿಸುತ್ತಾರೆಯೇ ?

ಶ್ರೀ ವೀರೇಂದ್ರ ಪಾಟೀಲ್.—ನನಗೆ ತಿಳಿಸಿದರೆ ಅದನ್ನು ಪರಿಶೀಲನೆ ಮಾಡಿಸುತ್ತೇನೆ.

Development of Railways in the State, during the IV Five-Year Plan.

*Q.—518. Sri D. M. SIDDAIAH (Biligere).—

Will the Government be pleased to state :—

(*a*) whether the State Government have submitted any plans to the Centre for development of Railways in Mysore State in the IV Five-Year Plan ;

(*b*) if so, what are the routes proposed ;

(*c*) whether any preliminary Survey has been ordered ?

*A.—Sri VEERENDRA PATIL (Minister for Public Works).—

(*a*) A comprehensive reference has been made to the Ministry of Railways, Central Government.

(*b*) (i) Broad-gauging the line between Hospet and Hubli and Hubli and Goa.

(ii) A Broad-gauge line to connect Karwar Port with Poona-Bangalore line at Hubli or near about.

(iii) Kottur-Harihar line.

(iv) A new line from Harihar to connect-Hassan-Mangalore line near Moodabidri or near about.

(v) A new line from Talguppa to Karwar *via* Sirsi.

(vi) A new line from Gadag to Wadi.

(vii) Chamarajanagar-Sathyamangalam Railway line.

(iii) onversion of the Guntakal-Bangalore M.G. line to B.G.

(c) No survey work has been ordered except in respect of Hospet-Goa section and Sathyamangalam-Chamarajanagar Railway. In case of Hubli Karwar Railway a traffic appreciation was made but not a regular traffic Survey.

Sri D. M. SIDDIAH.—In answering (c), Government have stated that no survey work has been ordered except in respect of Hospet-Goa Section and Satyamangalam-Chamarajanagar Railway. May I know the estimated cost of both and when the estimates were made ?

Sri VEERENDRA PATIL.—That information is not with us. The information we have gathered is that they have prepared the load survey and made a report to the Railway Board.

Sri D. M. SIDDIAH.—Government was pleased to say that there is a persistent reference to the Central Government. May I request the Government to give top-priority to the Sathyamangalam-Chamarajanagar Railway ?

Sri VEERENDRA PATIL.—We have referred all these lines to the Government of India and to the Railway Board. It is for the Railway Board to decide.

ಶ್ರೀ ಎ. ಜೆ. ದೊಡ್ಡಮೇಟಿ.—ಉತ್ತರ ಕೊಟ್ಟಿರುವುದರಲ್ಲಿ ಅನೇಕ ರೈಲು ಮಾರ್ಗಗಳನ್ನು ಕೊಡಲಾಗಿದೆ. ಅವುಗಳನ್ನು ಪ್ರಾಶಸ್ತ್ಯ ನೋಡಿ ಕೊಟ್ಟಿದ್ದೀರಾ ಅಥವಾ ಸಹಜವಾಗಿ ಬಂದಿದೆಯೋ ?

ಶ್ರೀ ವೀರೇಂದ್ರ ಪಾಟೀಲ್.—ಒಂದು ಪಟ್ಟಿ ಮಾಡಿ ಈಗಾಗಲೇ ಸಿಫಾರಸು ಮಾಡಿದ್ದೇವೆ. ಪ್ರಾಶಸ್ತ್ಯದ ಪ್ರಕಾರ ಪಟ್ಟಿಯನ್ನು ಕೊಟ್ಟಿಲ್ಲ.

ಶ್ರೀ ಬಿ. ಎಲ್. ಗೌಡ.—ಚಿತ್ರದುರ್ಗ-ರಾಯಚೂರು ರೈಲ್ವೆ ಮಾರ್ಗವನ್ನು ಮಾಡಿಸಿಕೊಡುವುದಾಗಿ ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಆ ಮಾರ್ಗ ಈ ಪಟ್ಟಿಯಲ್ಲಿಲ್ಲ. ಅದರ ಬಗ್ಗೆ ಅಡಿಷನರ್ ರೆಕಮೆಂಡೇಷನ್ ಕಳಿಸಿಕೊಡಲು ಪ್ರಯತ್ನ ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀರ್.—ಸಿಫಾರಸು ಮಾಡುವುದಕ್ಕೆ ನಾವು ಹಿಂದು ಮುಂದು ನೋಡುವ ಹಾಗೆ ಇಲ್ಲ. ನಾವು ಕಳಿಸಿದ್ದು ಆಗಬೇಕು ಅಷ್ಟೆ. ನಾವು ಬೇಕಾದಷ್ಟು ರೈಲ್ವೆಗಳನ್ನು ಕೇಳಿದರೆ ರಾಜ್ಯದವರು ಯಾವುದೇ ಮಾರ್ಗದ ಬಗ್ಗೆ ಸೀರಿಯಸ್ ಆಗಿ ಇಲ್ಲ, ಬಂದದ್ದನ್ನು ಎಲ್ಲ ಕಳಿಸುತ್ತಿದ್ದಾರೆ ಎನ್ನುವ ಅಭಿಪ್ರಾಯ ಬರಬಹುದು. ನಾವು ಕಳಿಸಿರುವ 8 ಮಾರ್ಗಗಳಲ್ಲಿ ಒಂದೆರಡನ್ನು ತೆಗೆದು ಕೊಂಡರೆ ನಮ್ಮಷ್ಟು ಸುದ್ಯೆವಿಗಳು ಯಾರೂ ಇಲ್ಲ ಎಂದು ಹೇಳಬಹುದು. ಅತಿ ಮುಖ್ಯವಾಗಿ ರಾಜ್ಯದ ಆರ್ಥಿಕ ಅಭಿವೃದ್ಧಿಗೆ ಸಹಾಯ ಆಗುವಂಥ ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು ಇಲ್ಲಿಯವರೆಗೆ 8 ಲೈನುಗಳನ್ನು ತೆಗೆದುಕೊಳ್ಳಬೇಕು ಎಂದು ಸಿಫಾರಸು ಮಾಡಿದ್ದೇವೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—1951ನೆ ಇಸವಿಯಲ್ಲಿ ಶ್ರೀಮಾನ್ ಗೋಪಾಲಸ್ವಾಮಿ ಅಯ್ಯಂಗಾರ್ ಅವರು ಸತ್ಯಮಂಗಲ—ಚಾಮರಾಜನಗರ ರೈಲು ಮಾರ್ಗಕ್ಕೆ ಆದ್ಯತೆಯನ್ನು ಕೊಡುತ್ತೇವೆಂದು ಹೇಳಿದ್ದರು. ಇಷ್ಟು ವರ್ಷವಾದರೂ ಅದನ್ನು ಕೈ ಬಿಡುವುದಕ್ಕೆ ಕಾರಣವೇನು ?

ಶ್ರೀ ವೀರೇಂದ್ರ ಪಾಟೀರ್.—1952 ರಲ್ಲಿ ಪಾರ್ಲಮೆಂಟಿನಲ್ಲಿ ಅಂಥ ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಅದರ ಮೇರೆಯೇ ನಾವು ಅನೇಕ ಸಲ ಬರೆದಿದ್ದೇವೆ, ಪ್ರತ್ಯಕ್ಷವಾಗಿ ಹೋದಾಗ ಹೇಳಿದ್ದೇವೆ, ಆ ಮಾರ್ಗವನ್ನು ಮಾಡಬೇಕೆಂದು ಒತ್ತಾಯಪೂರ್ವಕವಾಗಿ ಹೇಳಿದ್ದೇವೆ.

Sri G. V. GOWDA.—Was any representation made in 1959 to change the proposals from Sathyamangalam-Chamarajanagar railway into Kollegal-Chamarajanagar-Sathyamangalam ? Since the work has been ordered, could you make representation to the Government of India to take the survey between Kollegal-Chamarajanagar also ?

Sri VEERENDRA PATIL.—That information is not available

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಬೆಂಗಳೂರು).—ಮೈಸೂರು ರೈಲ್ವೆ ಮಾರ್ಗವನ್ನು ಎರೆಕ್ಟ್ರಿಫೈ ಮಾಡುವುದಕ್ಕೆ ಹಿಂದೆ ಸರ್ವೆ ಕೆಲಸ ಆಗಿತ್ತು. ಅದರ ಬಗ್ಗೆ ಏನಾದರೂ ಕಾರ್ಯಕ್ರಮ ತೆಗೆದುಕೊಂಡಿದ್ದೀರಾ ?

ಶ್ರೀ ವೀರೇಂದ್ರ ಪಾಟೀಲ್.—ಬೆಂಗಳೂರು ಮೈಸೂರು ಮಾರ್ಗವನ್ನು ಬಹುಶಃ ಬ್ರಾಡ್ ಗೇಜ್ ಮಾಡುವುದರ ಸಲುವಾಗಿ ಬರೆದಾಗಿದೆ. ಆ ವಿಚಾರವನ್ನು ಯಾವಾಗಲೂ ಚರ್ಚೆಗಳಲ್ಲಿ, ಕಾನ್‌ಫರೆನ್ಸ್‌ಗಳಲ್ಲಿ, ಮೀಟಿಂಗ್‌ಗಳಲ್ಲಿ ಒತ್ತಾಯಪಡಿಸುತ್ತಿದ್ದೇವೆ. ನಮಗೆ ಬಂದಿರುವ ಭಯ ವೆಂದರೆ ಈಗಾಗಲೇ 8 ರೈನ್‌ಗಳನ್ನು ಶಿಫಾರ್ಸ್ ಮಾಡಿದ್ದೇವೆ. ಇದನ್ನೂ ಸೇರಿಸುವುದಾದರೆ ಯಾವು ದನ್ನು ಮೊದಲು ಕೇಳಬೇಕು ಎನ್ನುವಂಥ ಪರಿಸ್ಥಿತಿಯಲ್ಲಿದ್ದೇವೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನಾನು ಕೇಳಿದ್ದು ಬ್ರಾಡ್‌ಗೇಜ್ ಮಾಡುವ ವಿಷಯ ವಲ್ಲ. ಈ ಮಾರ್ಗವನ್ನು ಎರೆಕ್ಟ್ರಿಫೈ ಮಾಡಬೇಕು ಎಂದು ಹಿಂದೆಯೇ ಸರ್ವೆ ಆಗಿದೆ. ಇದರ ವಿಷಯ ಏನಾಗಿದೆ ಎಂದು ತಿಳಿಸುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಹಿಂದೆ ದಾಸಪ್ಪನವರು ರೈಲ್ವೆ ಮಂತ್ರಿಗಳಾಗಿದ್ದಾಗ ಅವರೂ ಮತ್ತು ನಮ್ಮ ಮುಖ್ಯಮಂತ್ರಿಗಳೂ ಚರ್ಚೆ ಮಾಡಿದ್ದಾರೆ. ಆ ಸಂದರ್ಭದಲ್ಲಿ ನಾವು ಅವರಿಗೆ ಹೇಳಿ ದ್ದೇವೆ, ಯಾವುದಾದರೂ ಮಾರ್ಗದಲ್ಲಿ ಎರೆಕ್ಟ್ರಿಫೈ ಮಾಡುವುದಾದರೆ ಅಗ್ಗದ ದರದಲ್ಲಿ ಬೇಕಾಗುವಂಥ ವಿದ್ಯುತ್ತನ್ನು ಒದಗಿಸುತ್ತೇವೆ ಎಂದು ಹೇಳಿದ್ದೇವೆ. ಆದರೆ ಇನ್ನೂವರೆಗೂ ನಮಗೆ ಕೇಂದ್ರದಿಂದ ಏನೂ ತಿಳಿದು ಬಂದಿಲ್ಲ.

ಶ್ರೀ ಎಂ. ಎನ್. ಕೃಷ್ಣಸಿಂಗ್.—ರಾಜ್ಯ ಸರ್ಕಾರ ಕೇಂದ್ರಕ್ಕೆ ಕಳುಹಿಸಿರುವ ಪಟ್ಟಿಯಲ್ಲಿ ಕೊಟ್ಟೂರು ಹರಿಹರ ಮಾರ್ಗವಿದೆ. ಆ ಮಾರ್ಗ ಜಗಳೂರು ಮುಖಾಂತರ ಹೋಗುವ ಪ್ರಪೋಸಲ್ ಇದೆ ಎಂದು ಕೇಳಿದ್ದೀನಿ ಅದು ನಿಜವೇ ? ಹಾಗಿಲ್ಲದೆ ಹೋದರೆ ಸರ್ಕಾರ ಇದನ್ನು ಹೊಸದಾಗಿ ಸೇರಿಸುವುದಕ್ಕೆ ಏರ್ಪಾಡು ಮಾಡುತ್ತದೆಯೇ !

ಶ್ರೀ ವೀರೇಂದ್ರ ಪಾಟೀಲ್.—ಕೊಟ್ಟೂರು—ಹರಿಹರ ಮಾರ್ಗ ನೇರವಾಗಿ (ಸ್ಟ್ರೈಟ್ ಅಲೈನ ಮೆಂಟ್) ಹೋಗುತ್ತದೆ. ಯಾವುದೇ ಊರಿನ ಮುಖಾಂತರ ಹೋಗುವುದಕ್ಕಾಗುವುದಿಲ್ಲ. ಇದನ್ನು ಏಕೆ ಒತ್ತಾಯ ಪಡಿಸುತ್ತಿದ್ದೇವೆಂದರೆ, ಈ ಮಾರ್ಗ ಪೂರ್ಣವಾದರೆ ಬಳ್ಳಾರಿ ಮತ್ತು ಹೊಸಪೇಟೆ ಭಾಗಗಳಿಂದ ಕಬ್ಬಿಣದ ಅದಿರನ್ನು ಮಂಗಳೂರಿಗೆ ಸಾಗಿಸುವುದಕ್ಕೆ ಬಹಳ ಅನುಕೂಲವಾಗುತ್ತದೆ.

ಶ್ರೀ ಎಸ್. ಎಂ. ಕೃಷ್ಣ.—ಹೊಸ ರೈಲು ಮಾರ್ಗಗಳನ್ನು ಕೊಡುವ ವಿಧಾನದಲ್ಲಿ ದಕ್ಷಿಣ ರಾಜ್ಯಗಳಿಗೆ ಬಹಳ ಮಟ್ಟಿಗೆ ಅನ್ಯಾಯವಾಗಿದೆ, ಅದರಲ್ಲಿಯೂ ಮೈಸೂರು ರಾಜ್ಯಕ್ಕೆ ಬಹಳ ಮಟ್ಟಿಗೆ ಅನ್ಯಾಯವಾಗಿದೆ ಎನ್ನುವ ವಿಚಾರವನ್ನು ಸರ್ಕಾರ ಮನಗಂಡಿದೆಯೇ, ಸ್ವಾಮಿ ?

ಶ್ರೀ ವೀರೇಂದ್ರ ಪಾಟೀಲ್.—ದಕ್ಷಿಣಕ್ಕೆ ಅನ್ಯಾಯವಾಗಿದೆ ಎನ್ನುವ ಮಾತನ್ನು ನಾನು ಹೇಳಲಾರೆ. ಮೈಸೂರು ರಾಜ್ಯಕ್ಕೆ ಏನು ನ್ಯಾಯ ಸಿಕ್ಕಬೇಕಾಗಿತ್ತೊ ಆ ನ್ಯಾಯ ಸಿಕ್ಕಿಲ್ಲ ಎಂದು ಅನೇಕ ಸಲ ಹೇಳಿದ್ದೇನೆ.

ಶ್ರೀ ಟಿ. ಡಿ. ದೇವೇಂದ್ರಪ್ಪ,—ಭದ್ರಾವತಿ ಇಡೀ ಇಂಡಿಯಾ ದೇಶದಲ್ಲಯೇ ದೊಡ್ಡ ಕೈಗಾರಿಕಾ ಕ್ಷೇತ್ರವಾಗಿದೆ. ಸಾಮಾನುಗಳು ಸುಲಭವಾಗಿ ಹತ್ತಿರದ ದಾರಿಯಲ್ಲಿ ಬರುವಂತಾಗಲು ಭದ್ರಾವತಿ ಯಿಂದ ಹರಿಹರಕ್ಕೆ ಹೊಸ ರೈಲು ಮಾರ್ಗವನ್ನು ಹಾಕತಕ್ಕ ಯೋಜನೆಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡುವ ಏರ್ಪಾಡು ಮಾಡುತ್ತೀರಾ, ಸ್ವಾಮಿ ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರಿಗೆ ಈಗಾಗಲೇ ಸಾಕಷ್ಟು ತಿಳಿಯುವಂತೆ ಹೇಳಿ ದ್ದೇನೆ. ಈಗ ಎಂಟು ಮಾರ್ಗಗಳನ್ನು ಕೇಳಿದ್ದೇವೆ. ಅವುಗಳಲ್ಲಿ ಒಂದೆರಡು ಸಿಕ್ಕಿದರೂ ಅದು ನಮ್ಮ ಸುದೈವವೆಂದು ಭಾವಿಸಬೇಕಾಗುತ್ತದೆ. ಇನ್ನೂ ಈ ಮಾರ್ಗಗಳ ಪಟ್ಟಿಯನ್ನು ಹೆಚ್ಚು ಮಾಡುತ್ತ ಹೋದರೆ ಯಾವುದೂ ಸಿಕ್ಕಲಾರದಂಥ ಪರಿಸ್ಥಿತಿ ಬರಬಹುದು. ಅದಕ್ಕಾಗಿ ಅತಿ ಮುಖ್ಯವಾದ ಮಾರ್ಗಗಳ ವಿಚಾರದಲ್ಲಿ ಮಾತ್ರ ಗಮನ ಕೊಡಬೇಕಾಗುತ್ತದೆ.

Sri SANJEEVANATHA AIKALA.—Is it a fact that the Government proposes to have suburban railway around Bangalore Corporation touching the satelite town of Kengeri ? If so, why is it not included in this list ?

Mr. SPEAKER.—Are we having a railway Budget ? Supplementaries should be something within the main Question.

Sri SANJEEVANATH AIKALA.—These are the recommendations of the Government. Why is this not included—circular railway ?

Mr. SPEAKER.—Let it be answered.

ಶ್ರೀ ವೀರೇಂದ್ರ ಪಾಟೀಲ್.—ಆ ರೀತಿಯ ಪ್ರಪೋಸಲ್ ಇಲ್ಲ.

ಶ್ರೀ ಎಸ್. ಎ. ಅಗ್ನಿಹೋತ್ರಿ.—ಪೂನಾ ಮತ್ತು ಬೆಂಗಳೂರು ನಡುವೆ ಬ್ರಾಡಗೇಜ್ ಆಗಬೇಕೆಂದು ಮಹಾರಾಷ್ಟ್ರ ಜನತೆ ಮತ್ತು ಮೈಸೂರಿನ ಜನತೆ ಒತ್ತಾಯ ಪಡಿಸಿದಾಗ ಅದನ್ನು ಮಾಡುತ್ತೇವೆಂದು ಭರವಸೆಯನ್ನು ಕೊಟ್ಟರು. ಬ್ರಾಡ್‌ಗೇಜ್ ಮಾರ್ಗ ಮೀರಜ್ ತನಕ ಆಗುವುದಕ್ಕೆ ಈಚೆಗೆ ಅನುಮತಿ ಕೊಟ್ಟಿದ್ದಾರೆ. ಇದರಿಂದ ಮಹಾರಾಷ್ಟ್ರ ಸರ್ಕಾರ ಗೆದ್ದ ಹಾಗೆ ಆಯಿತು, ಮೈಸೂರು ಸರ್ಕಾರ ಹಿಂದೆ ಬಿತ್ತು ಆಲ್ಲವೇ, ಸ್ವಾಮಿ ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ಹೇಳುವುದು ನಿಜ. ಪೂನಾದಿಂದ ಮೀರಜ್ ವರೆಗೂ ಬ್ರಾಡ್‌ಗೇಜ್ ಮಾರ್ಗ ಆಗುತ್ತಿದೆ. ಗುಂತಕಲ್‌ನಿಂದ ಹೊಸಪೇಟೆಯವರೆಗೂ ಬ್ರಾಡ್‌ಗೇಜ್ ಮಾಡಿದ್ದಾರೆ. ಮಧ್ಯದಲ್ಲಿರುವ ಭಾಗವನ್ನು ಬಿಟ್ಟಿದ್ದಾರೆ. ಇದನ್ನೂ ಕೂಡ ತೆಗೆದುಕೊಳ್ಳಬೇಕೆಂದು ಹೇಳುವ ಪರಿಸ್ಥಿತಿಯಲ್ಲಿದ್ದಾರೆಂದು ತಿಳಿದು ಬಂದಿದೆ. ಹೊಸಪೇಟೆಯಿಂದ ಸುಮಾರು ನಾಲ್ಕು ಮಿಲಿಯನ್ ಟನ್ ಅದುರು ಗೋವಾಕ್ಕೆ ಸಾಗಿಸಲು ಎಂ. ಎಂ. ಟಿ. ಸಿ. ಕಾರ್ಯಕ್ರಮವಿದೆ. ಅದನ್ನು ಸಾಗಿಸಲು ಬ್ರಾಡ್‌ಗೇಜ್ ಮಾಡುತ್ತೇವೆಂದು ಹೇಳಿದ್ದಾರೆ. ಇದಕ್ಕಾಗಿ ಪೂರ್ವಿಕ ಸರ್ವೆ ಕೆಲಸನ್ನು ಮಾಡುತ್ತಿದ್ದಾರೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಾಲ್ಕನೆ ಯೋಜನೆಯಲ್ಲಿ ಎಂಟು ರೈಲುಗಳನ್ನು ಬಿಡುತ್ತೇವೆಂದು ಹೇಳಿದ್ದಾರೆ. ನಾಲ್ಕನೆ ಯೋಜನೆ ಮುಗಿಯುವುದರೊಳಗೆ ಎಷ್ಟು ರಸ್ತೆಗಳಲ್ಲಿ, ರೈಲುಗಳಲ್ಲಿ ರೈಲು ಬಿಡುವುದಕ್ಕೆ ಸಾಧ್ಯವಾಗುತ್ತದೆ ಸ್ವಾಮಿ ?

ಶ್ರೀ ಎಂ. ವಿ. ಕೃಷ್ಣಪ್ಪ (ಕಂದಾಯ ಶಾಖೆಯ ಮಂತ್ರಿಗಳು).—ಅವರಿಗೆ ರೈಲು ಬಿಡುವ ಅನುಭವ ಬಹಳ ಇದೆ, ಸ್ವಾಮಿ !

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಕನ್ನಡಕ್ಕೆ ತರ್ಜುಮೆ ಮಾಡಿದರೆ ಹಾಗೆ ಬರುತ್ತದೆ.

ಶ್ರೀ ವೀರೇಂದ್ರ ಪಾಟೀಲ್.—ರಸ್ತೆಯಲ್ಲಿ ರೈಲು ಬಿಡುವುದು ನಮ್ಮಿಂದ ಸಾಧ್ಯವಿಲ್ಲ. ಮಾನ್ಯ ಸದಸ್ಯರಿಗೆ ಸಾಧ್ಯವಿದೆ ಎಂದು ನನಗನ್ನಿಸುತ್ತದೆ.

ಶ್ರೀ ಎಂ. ವಿ. ಕೃಷ್ಣಪ್ಪ.—ಬೆಂಗಳೂರಿನಲ್ಲಿ ಒಂದು ರೋಡ್ ರೈಲು ಇದೆ, ಸ್ವಾಮಿ.

Sri S. M. KRISHNA.—Having been convinced that justice has not been done to Mysore State, why is it that the State Government has been betraying its helplessness in this regard ? Shall we take it that the State Government has not been able to adequately impress upon the Central Government the need that Mysore should be given equitable justice under the federal set up ? Or shall we take it that the Government is meek, weak and it is undecided ?

Sri VEERENDRA PATIL.—There is no question of Government either being weak or pleading helpiessness. Whatever is possible, we have been doing and representing to the Government of India and when they finalise the fourth five year plan, we hope we are going to get one in the fourth plan.

ಶ್ರೀ ಗಾಂಜಿ ವೀರಪ್ಪ.—ಹೊನಡುರ್ಗದಲ್ಲಿ ಸಿಮೆಂಟ್ ಕಾರ್ಖಾನೆಯನ್ನು ಮಾಡಬೇಕೆಂದಿರುವಾಗ ಅಲ್ಲಿಗೆ ರೈಲ್ವೆ ಕಮ್ಯೂನಿಕೇಷನ್ಸ್ ಹೆಚ್ಚಿಗೆ ಇಲ್ಲವೆಂದು ಹೇಳುತ್ತಿದ್ದಾರೆ. ಅದಕ್ಕೋಸ್ಕರ ಹೊನಡುರ್ಗ, ಹರಿಯೂರು, ಮತ್ತು ರಾಯದುರ್ಗ ಮಾರ್ಗವಾಗಿ ಒಂದು ರೈಲ್ವೆ ಮಾರ್ಗವನ್ನು ಜಾಗ್ರತೆ ಮಾಡುವಂತೆ ನಮ್ಮ ಸರ್ಕಾರದವರು ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡಿದ್ದಾರೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಅಲ್ಲಿಗೆ ಸಿಮೆಂಟ್ ಕಾರ್ಖಾನೆ ಬಂದರೆ ನ್ಯಾಷುರಲ್ಲಾಗಿ ರೈಲ್ವೆ ಲೈನ್ ಅಲ್ಲಿ ಹಾಕಬೇಕೆಂದು ಹೊಸ ಹೊಸ ಸೂಚನೆಗಳು ಬರುತ್ತಿವೆ. ಅಲ್ಲಿಗೆ ಮಾನ್ಯ ಸದಸ್ಯರ ಸಲಹೆ ಪ್ರಕಾರ ರೈಲ್ವೆ ಮಾರ್ಗ ಬರುತ್ತದೆ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಮಂಗಳೂರಿನಿಂದ ಹಾಸನ ತನಕ ಒಂದು ರೈಲ್ವೆ ಲೈನನ್ನು ಹಾಕುವ ಯೋಜನೆಯನ್ನು ಹಾಕಿಕೊಂಡಿದ್ದಾರೆಂದು ಹೇಳಿದರು. ಮಂಗಳೂರಿನಿಂದ ಬೆಂಗಳೂರಿನವರೆಗೆ ರೈಲು ಬಿಡುವುದು ಬಹಳ ಮುಖ್ಯವಾದದು, ಅದರ ಬಗ್ಗೆ ಹೆಚ್ಚು ಗಮನ ತೆಗೆದುಕೊಳ್ಳಬೇಕೆಂದು ಶ್ರೀ ಮಾನ್ ಹನುಮಂತಯ್ಯನವರು ಅವರ ಮಂತ್ರಿಮಂಡಲ ಕಾಲದಲ್ಲಿ ಹೇಳುತ್ತಿದ್ದರು. ಆದರೆ ಈ ಮಂತ್ರಿಮಂಡಲ ಬಂದ ಮೇಲೆ ಅದನ್ನು ನಿಲ್ಲಿಸಿದ್ದಾರೆ, ಅದಕ್ಕೆ ಕಾರಣವಾದರೂ ಏನು ?

ಶ್ರೀ ವೀರೇಂದ್ರ ಪಾಟೀಲ್.—ನಾನು ಮೊದಲೇ ಸ್ಪಷ್ಟವಾಗಿ ಹೇಳಿದ್ದೇನೆ. ರೈಲು ಬಿಡುವ ಕೆಲಸ ನಮ್ಮದು ಅಲ್ಲ, ರೈಲು ನಾವು ಬಿಡುವ ಹಾಗೆ ಇಲ್ಲ.

ಶ್ರೀ ಎಸ್. ಎಸ್. ಕೊಳ್ಳೇಬೈಲ್.—ಗೇರುಸೊಪ್ಪ ಜಲಪಾತ ಭೂಲೋಕದಲ್ಲಿ ಹೆಸರುವಾಸಿಯಾದಂತೆ ತಾಳಗೊಪ್ಪ—ಭಟ್ಕಳ್ ರೈಲುಮಾರ್ಗ ಹೆಸರುವಾಸಿಯಾಗಿರುವುದರಿಂದ ಅದನ್ನು ಅಭಿವೃದ್ಧಿಮಾಡಿ ಏನು ಅನುಕೂಲಗಳನ್ನು ಒದಗಿಸುತ್ತಾರೆ.

ಶ್ರೀ ವೀರೇಂದ್ರ ಪಾಟೀಲ್.—ಈಗಾಗಲೇ 8 ರೈಲುಮಾರ್ಗಗಳನ್ನು ಪಟ್ಟಿಯಲ್ಲಿ ಕೊಟ್ಟಿದೆ. ಕೇಂದ್ರ ಸರ್ಕಾರದ ರೈಲ್ವೆ ಇಲಾಖೆಯವರು ಈಗ ಸರ್ವೆಮಾಡಿ ಕಾರವಾರ ಅಥವಾ ಭಟ್ಕಳ್ ಯಾವುದು ಆಗುತ್ತದೆಂದು ಹೇಳಿದರೆ ಅದನ್ನು ಮಾಡಬಹುದು.

ಶ್ರೀ ಎಸ್. ಗೋಪಾಲಗೌಡ.—ರಾಜ್ಯದ ರೈಲ್ವೆ ಅವಶ್ಯಕತೆಗಳನ್ನು ಪರಿಶೀಲನೆಮಾಡುವುದಕ್ಕೆ ಮಂತ್ರಿಮಂಡಲವಲ್ಲದೆ ಬೇರೆ ಏನಾದರೂ ವ್ಯವಸ್ಥೆ ಇದೆಯೇ ? ಮತ್ತು ಕೇಂದ್ರದ ರೈಲ್ವೆ ಖಾತೆಯ ಜೊತೆಯಲ್ಲಿ ಈ ರೈಲ್ವೆ ಮಾರ್ಗಗಳ ಅವಶ್ಯಕತೆಯನ್ನು ಹೇಳುವ ಬಗ್ಗೆ ಈ ರಾಜ್ಯದಲ್ಲಿ ಇವರೇನಾದರೂ ಸಮೀಕ್ಷೆಮಾಡಿದ್ದಾರೆಯೇ ?

ಶ್ರೀ ವೀರೇಂದ್ರಪಾಟೀಲ್.—ರಾಜ್ಯ ಸರ್ಕಾರದವರು ಕೇಂದ್ರ ಸರ್ಕಾರಕ್ಕೆ ಈ ಬಗ್ಗೆ ಶಿಫಾರ್ಸು ಮಾಡಬೇಕಾಗಿಲ್ಲ. ಮಂತ್ರಿಮಂಡಲದಲ್ಲಿಟ್ಟು ಸರ್ಕಾರದವರು ಈ ವಿಚಾರವನ್ನು ಪರಿಶೀಲನೆಮಾಡಿ ಅದರ ಬಗ್ಗೆ ಬೇಕಾದಷ್ಟು ಮಾಹಿತಿಯನ್ನು ಕಲೆಕ್ಟ್‌ಮಾಡಿ ಆಗಾಗ್ಗೆ ಕೇಂದ್ರ ಸರ್ಕಾರಕ್ಕೆ ಕಳುಹಿಸುತ್ತಿದ್ದೇವೆ. ಅದು ಮಾನ್ಯ ಸದಸ್ಯರನೇಕರಿಗೆ ಗೊತ್ತಿದೆ. ಎಲ್ಲೆಲ್ಲ ರೈಲ್ವೆ ಮಾರ್ಗಗಳನ್ನು ಹಾಕಬೇಕು, ಎಲ್ಲೆಲ್ಲ ಅದರಿಂದ ನಮ್ಮ ಆರ್ಥಿಕಾಭಿವೃದ್ಧಿಯಾಗುತ್ತದೆಂಬುದನ್ನೂ ಸಹ ಪರಿಗಣಿಸಲಾಗಿದೆ. ಇತ್ತೀಚೆಗೆ ಹುಬ್ಬಳ್ಳಿ—ಕಾರವಾರದ ರೈಲ್ವೆ ಸಂಬಂಧದಲ್ಲಿ ಅದನ್ನು ಜಸ್ಟಿಫೈ ಮಾಡುವುದಕ್ಕೆ ಹಾಗೂ ಅದರ ಬಾಗ್ಗೆ ಸವಿಸ್ತಾರವಾಗಿ ವರದಿ ಮಾಡುವುದಕ್ಕೆ ರೈಲ್ವೆ ಇಲಾಖೆಯಲ್ಲಿದ್ದಂತಹ ಒಬ್ಬ ಟ್ರಾಫಿಕ್ ಮ್ಯಾನೇಜರನ್ನು ಸ್ಪೆಷರ್ ಅಫೀಸರಾಗಿ ನೇಮಿಸಿವ್ವಾರೆ. ಅವರಿಂದ ವರದಿ ಇಷ್ಟರಲ್ಲೇ ನಮಗೆ ಬರುತ್ತದೆ. ಅದನ್ನು ಅಚ್ಚು ಹಾಕಿಸಿ ಕೇಂದ್ರ ಸರ್ಕಾರಕ್ಕೂ ಮತ್ತು ರಾಜ್ಯ ಸರ್ಕಾರಕ್ಕೂ ಕಳುಹಿಸುತ್ತೇವೆಂದು ಹೇಳಿದ್ದಾರೆ.

Mr. SPEAKER.—I revise my opinion. There are two more Questions and I find they are important. The present question relates the Central Government subject and whatever representations have to be made by members, may please be given to me and I will send them to the Government with a request that they may press the Centre to accord such priority or order necessary for taking up those works.

Electrification scheme of Murdeswar.

*Q.—488. Sri R. S. HEGDE (Honnavar).—

Will the Government be pleased to state :—

(*a*) when the scheme of electrifying of Murdeshwar was santioned;

(*b*) what is the progress of work achieved so far;

(*c*) the number of times the Superintending Engineers and Executive Engineer Electrical, Mangalore toured the area in that connection ?

A.—Sri VEERENDRA PATIL (Minister for Public Works).—

(*a*) The Scheme was sanctioned on 25-10-1965.

(*b*) The work will be taken up shortly.

(*c*) Superintending Engineer Nil.
Executive Engineer (Electrical) Mangalore-1.